ಅಧ್ಯಕ್ಷರು :– ನಾಗರಾಜ್‌ರವರೆ ಕೇಳಿ, ಈ ತರಹ ಆದರೆ ಹೇಗೆ?

(ಗೊಂದಲ)

ಶ್ರೀ ಅಮರೇಗೌಡ ಲಿಂಗನಗೌಡ ಪಾಟೀಲ್ ಬಯ್ಯಾಪುರ :– ಸನ್ಮಾನ್ಯ ಶಾಸಕರೆ, ನಾವು ಅದನ್ನು ಲಿಕ್ವಿಡೇಷನ್ ಮಾಡಬೇಕೋ ಅಥವಾ ಏನು ಮಾಡಬೇಕು ಎಂಬ ಬಗ್ಗೆ ಕಾನೂನು ತಜ್ಞರ ಸಲಹೆ ಪಡೆಯುವುದನ್ನು ಮಾಡುತ್ತಿದ್ದೇವೆ. ಆನಂತರ ಇದರ ಮೇಲೆ ಕ್ರಮ ಜರುಗಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್ :– ರೈತರಿಗೆ ಅನ್ಯಾಯವಾಗಿದೆ....

(ಗೊಂದಲ)

ಅಧ್ಯಕ್ಷರು :– ಸಕ್ಕರೆ ಸಚಿವರೆ, ಸಕ್ಕರೆ ಸಚಿವರಲ್ಲಿ ನನ್ನ ವಿನಂತಿ ಏನೆಂದರೆ, ಇದಕ್ಕೆ ಸಂಬಂಧಪಟ್ಟಹಾಗೆ, ಅನೇಕ ಸದಸ್ಯರು ಪ್ರಶ್ನೆ ಕೇಳುವುದಕ್ಕೆ ಇಷ್ಟಪಡುತ್ತಿದ್ದಾರೆ. ಆದುದರಿಂದ ಅವರೆಲ್ಲರನ್ನೂ ಒಂದು ಮೀಟಿಂಗ್ ಕರೆದು ಸಮಗ್ರವಾಗಿ ಚರ್ಚೆ ಮಾಡಿ.

ಶ್ರೀ ಅಮರೇಗೌಡ ಲಿಂಗನಗೌಡ ಪಾಟೀಲ್ ಬಯ್ಯಾಪುರ :– ಈಗಾಗಲೇ ಸಂಬಂಧಪಟ್ಟ ಜಿಲ್ಲಾ ಸಚಿವರನ್ನು, ಕೈಗಾರಿಕಾ ಸಚಿವರನ್ನು, ಉಪಮುಖ್ಯಮಂತ್ರಿಗಳೊಡನೆ ಚರ್ಚಿಸಿ, ಇದರ ಬಗ್ಗೆ ಕ್ರಮ ತಗೆದುಕೊಳ್ಳುವುದಕ್ಕೆ ನಾವು.....

(ಗೊಂದಲ)

ಅಧ್ಯಕ್ಷರು : ದಯಮಾಡಿ, ಸಂಬಂಧಪಟ್ಟ ಶಾಸಕರನ್ನು ಕರೆಯಿರಿ.

(ಗೊಂದಲ)

ಅಧ್ಯಕ್ಷರು : ಆಯಿತು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ರೈತರಿಗೆ ಅನ್ಯಾಯವಾಗಿದೆ. ನಾನು ಸಭಾತ್ಯಾಗ ಮಾಡುತ್ತೇನೆ.

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

(ಗೊಂದಲ)

ಅಧ್ಯಕ್ಷರು : ಎಂ.ಟಿ.ಕೃಷ್ಣಪ್ಪ ....

ಶ್ರೀ ಹೆಚ್.ಎಸ್. ಮಹದೇವಪ್ರಸಾದ್(ಆಹಾರ ಮತ್ತು ನಾಗರಿಕ ಪೂರೈಕೆ ಸಚಿವರು):– ಸಂಬಂಧಿಸಿದ ಪ್ರಶ್ನೆ ಕೇಳಲಿ, ಉತ್ತರ ಕೊಡೋಣ. ಈಗ ಪ್ರಶ್ನೆ ಇಲ್ಲ, ಅದರ ಬಗ್ಗೆ ಪ್ರಸ್ತಾಪ ಮಾಡಿ ಪ್ರಚಾರ ತೆಗೆದುಕೊಳ್ಳತಕ್ಕಂಥದ್ದು ಒಳ್ಳೆಯದಲ್ಲ.

(ಗೊಂದಲ)

ಅಧ್ಯಕ್ಷರು :– ಈಗ ಅನ್ನದಾನಿಯವರ ಪ್ರಶ್ನೆ .... ಇಲ್ಲಿ ಮಾತನಾಡಬಾರದು.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ :– ಈಗ ಮಹದೇಶ್ವರ ಸಕ್ಕರೆ ಕಾರ್ಖಾನೆ ಬಗ್ಗೆ ನೇರವಾಗಿ ಯಾವುದೇ ಪ್ರಶ್ನೆ ಇಲ್ಲ.

ಅಧ್ಯಕ್ಷರು :– ಆಯಿತು, ಕುಳಿತುಕೊಳ್ಳಿ. ಅವರ ಅಭಿಪ್ರಾಯ ಹೇಳಿದ್ದಾರೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ :– ಮಹದೇಶ್ವರ ಸಕ್ಕರೆ ಕಾರ್ಖಾನೆ ಬಗ್ಗೆ ಯಾವುದೇ ಪ್ರಶ್ನೆ ಕೇಳಿಲ್ಲ.

ಅಧ್ಯಕ್ಷರು :– ನಾನು ಅನ್ನದಾನಿಯವರನ್ನು ಕರೆದಿದ್ದೇನೆ. ದಯಮಾಡಿ, ಮಾನ್ಯ ಸಚಿವರು ಕುಳಿತುಕೊಳ್ಳಬೇಕು.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ :– ಸಮರ್ಪಕವಾಗಿ ಉತ್ತರ ಕೊಡುವವರೆಗೂ ಕೇಳುವ ಸಾವಧಾನವಿಲ್ಲದೆ ವಾಕ್‌ಔಟ್ ಮಾಡಿ....

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಬೃಹತ್, ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಸಚಿವರು):– ದಯವಿಟ್ಟು, ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಸರ್ಕಾರದ ಬಗ್ಗೆ ಏನು ಹೇಳಿ ಹೋಗಿದ್ದಾರೆ. ಅದು ರೆಕಾರ್ಡ್‌ಗೆ ಹೋಗಿದೆ. ದಯವಿಟ್ಟು ಅದನ್ನು ತೆಗೆಸಬೇಕು ಏಕಂದರೆ, ಈ ಸರ್ಕಾರ ಯಾವುದೇ (xxx)

ಕಾಂಗ್ರೆಸ್, ಜೆಡಿ(ಎಸ್) ಪಕ್ಷಗಳು ಸೇರಿಕೊಂಡು ನಾವು ಸಮ್ಮಿಶ್ರ ಸರ್ಕಾರ ಮಾಡಿದ್ದೇವೆ. ಎರಡನೆಯದಾಗಿ, ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಮಹದೇವ ಪ್ರಸಾದ್‌ರವರು ಬಹಳ ಇನಿಷಿಯೇಟೀವ್ ತೆಗೆದುಕೊಂಡು ಇದನ್ನು ಹೇಳಿದ ಮೇಲೆ ಪರಿಮಳ ನಾಗಪ್ಪನವರು ಮತ್ತೆ ಅಲ್ಲಿಯ ಶಾಸಕರು ಮಾನ್ಯ ಧ್ರುವ ನಾರಯಣರವರು, ಬಾಲರಾಜ್ ಇವರೆಲ್ಲಾ ಸೇರಿ ಉಪ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಅವರು ಸಕ್ಕರೆ ಮಂತ್ರಿಯಾದ ತಕ್ಷಣವೇ ನಾವು ಸಭೆ ಮಾಡಿದ್ದೇವೆ. ವಸ್ತುಸ್ಥಿತಿ ಏನೆಂದರೆ,

---

(x) ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಓನರ್ ಯಾರೆಂದು ಪತ್ತೆ ಮಾಡುವುದಕ್ಕೆ ಆಗಿರಲಿಲ್ಲ. ಯಾರು ಅದನ್ನು ಓನ್ ಮಾಡುವುದಕ್ಕೂ ಸಹ ತಯಾರಿರಲಿಲ್ಲ. ಆ ಪರಿಸ್ಥಿತಿಯಲ್ಲಿತ್ತು. ಅದನ್ನು ತಯಾರು ಮಾಡಿ, ಯಾರು ಓನರ್ ಎನ್ನುವುದನ್ನು ತಿಳಿದುಕೊಂಡು ಅವರಿಗೆ ನೋಟೀಸ್ ಕೊಟ್ಟು ಅವರ ಮೇಲೆ ಕ್ರಮ ತೆಗೆದುಕೊಳ್ಳುವುದರ ಜೊತೆಗೆ ಅವರು ಎಲ್ಲಿ ಯಾರೋ ಒಬ್ಬರು ಕಾರ್ಮಿಕರು ಫ್ಯಾಕ್ಟರಿ ಮೇಲೆ ನಿಂತುಕೊಂಡುಬಿಟ್ಟಿದ್ದರು. ನಾನು ಒಂದು ಅಶೂರೆನ್ಸ್ ಕೊಡದೇ ಹೋದರೆ ನಾನು ಸೂಯಿಸೈಡ್ ಮಾಡಿಕೊಂಡು ಬಿಡುತ್ತೇನೆ, ಎಂದು ಹೇಳಿ ನಾನು, ಉಪ ಮುಖ್ಯಮಂತ್ರಿಗಳು, ಜಿಲ್ಲಾ ಮಂತ್ರಿಗಳು ಅವರಿಗೆ ಫೋನ್ ಮಾಡಿ, ನೀನು ಸಾಯಬೇಡಪ್ಪ, ಬದುಕಬೇಕು, ಫ್ಯಾಕ್ಟರಿ ಬದುಕಬೇಕು ದಯವಿಟ್ಟು ನೀನು ಕೆಳಗಡೆ ಇಳಿ ಎಂದು ಹೇಳಿಬಿಟ್ಟು ಅವನನ್ನು ಮಹಡಿಯಿಂದ ಕೆಳಗಡೆ ಇಳಿಸಿದ್ದಾಯಿತು. ಇನಿಷಿಯೇಟೀವ್ ತೆಗೆದುಕೊಂಡು ಕೆಲಸ ಮಾಡುತ್ತಿರುವ ಮಂತ್ರಿಗಳಿಗೆ ನೀವು (xxx) ಎಂದು ಹೇಳಿದರೆ, ಅವರ ಕ್ಷೇತ್ರದಲ್ಲೇನು ರಿಫ್ಲೆಕ್ಷನ್ ಆಗಬೇಕು? ಆದ್ದರಿಂದ, ದಯವಿಟ್ಟು ತಮ್ಮಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ, ತಮ್ಮ ಸೂಚನೆಯನ್ನು ನಾವು ಸಂಪೂರ್ಣವಾಗಿ ಒಪ್ಪುತ್ತೇವೆ. ತಾವು ಕಬ್ಬು ಬೆಳೆಯುವ ರೈತರ ಸಮುದಾಯದಿಂದ ಬಂದಿರುವುದರಿಂದಾಗಿ ತಮಗೆ ಸಕ್ಕರೆ ಮತ್ತು ಸಮಸ್ಯೆ ಗೊತ್ತಿದೆ. ಮತ್ತೊಮ್ಮೆ ಉಪ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆಯನ್ನು ನಾವು ಮಾಡುತ್ತೇವೆ. ಅದಕ್ಕೆ ಪರಿಹಾರ ಕಂಡುಹಿಡಿಯುತ್ತೇವೆ. ಅದನ್ನು ಯಾವುದೇ ಕಾರಣಕ್ಕೂ ಸಹ ಅಲ್ಲಿಯ ಕಾರ್ಮಿಕರಿಗೂ ಅನುಕೂಲವಾಗಬೇಕು. ರೈತರಿಗೂ ಅನುಕೂಲವಾಗಬೇಕು. ಆ ರೀತಿಯಾದಂತಹ ನಿರ್ಧಾರಕ್ಕೆ ಬರುತ್ತೇವೆ. ತಮ್ಮ ಸಲಹೆಯನ್ನು ಒಪ್ಪುತ್ತೇವೆ, ಆದರೆ ದಯಮಾಡಿ ಅದನ್ನು ಕಡತದಿಂದ ತೆಗೆಸಬೇಕೆಂದು ಕೇಳಿಕೊಳ್ಳುತ್ತೇವೆ.

ಅಧ್ಯಕ್ಷರು :– ಅದನ್ನು ಕಡತದಲ್ಲಿ ನೋಡಿ ತೆಗೆಸುತ್ತೇನೆ. ಈಗ ಅನ್ನದಾನಿಯವರು ಪ್ರಶ್ನೆ ಕೇಳಿ.

ಶ್ರೀ ಹೆಚ್. ಆಂಜನೇಯ :– ಮಾನ್ಯ ಅಧ್ಯಕ್ಷರೇ, ಚಿತ್ರದುರ್ಗದಲ್ಲಿ ಒಂದೇ ಒಂದು ಸಕ್ಕರೆ ಕಾರ್ಖಾನೆ ಹಿರಿಯೂರಿನಲ್ಲಿ ಸ್ಥಾಪನೆ ಮಾಡಿರುವಂತಹ ವಾಣಿವಿಲಾಸ ಸಕ್ಕರೆ ಕಾರ್ಖಾನೆ ಮುಚ್ಚಿಹೋಗಿ ಎರಡು ವರ್ಷವಾಯಿತು. ಅಲ್ಲಿದ್ದಂತಹ ಕಾರ್ಮಿಕರಿಗೆ ಸಂಬಳ ಇಲ್ಲದೆ ಅವರು ಬೀದಿ ಪಾಲಾಗಿದ್ದಾರೆ. ಅಲ್ಲಿನ ಕಾರ್ಮಿಕರು ತೊಂದರೆಗೊಳಗಾಗಿದ್ದಾರೆ. ಅಲ್ಲಿರತಕ್ಕಂಥ ಯಂತ್ರೋಪಕರಣಗಳು ಕೂಡ ಕೆಟ್ಟು ಹೋಗುತ್ತಿವೆ.

(x) ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಕೂಡಲೆ ಆ ಕಾರ್ಖಾನೆಗೆ ಪುನಶ್ಚೇತನ ಕೊಟ್ಟು ಅದರಲ್ಲಿದ್ದಂತಹ ಕಾರ್ಮಿಕರು ಹಾಗೂ ಕಾರ್ಖಾನೆಯನ್ನು ರಕ್ಷಣೆ ಮಾಡಬೇಕೆಂದು ಮಾನ್ಯ ಸಕ್ಕರೆ ಸಚಿವರನ್ನು ಹಾಗೂ ಭಾರೀ ಕೈಗಾರಿಕಾ ಸಚಿವರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ :– ಮಾನ್ಯ ಅಧ್ಯಕ್ಷರೇ, ಈಗ ನಾನು ಈಗಾಗಲೇ ಅದಕ್ಕೆ ಉತ್ತರವನ್ನು ಕೊಟ್ಟಿದ್ದೇನೆ. ಎಲ್ಲಾ ಕಾರ್ಖಾನೆಗಳನ್ನು ಪುನಶ್ಚೇತನ ಮಾಡತಕ್ಕಂಥ ವಿಚಾರದಲ್ಲಿ ವರದಿಯನ್ನು ತರಿಸಿಕೊಂಡು ನಾನು, ಕ್ಯಾಬಿನೇಟ್‌ನಲ್ಲಿ ಅದನ್ನು ಪರಿಶೀಲನೆ ಮಾಡಿ....

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಸದನದೊಳಗೆ ಪ್ರವೇಶಿಸಿದರು)

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷರೇ, ಖೋಡೆಯವರಿಂದ ಇವರಿಗೆ ಬಿಡಿಸಿಕೊಳ್ಳುವುದಕ್ಕಾಗಿಲ್ಲ. ಕಾರ್ಖಾನೆಯನ್ನು ಖೋಡೆಯವರಿಂದ....

ಅಧ್ಯಕ್ಷರು :– ಡಾ॥ ಕೆ. ಅನ್ನದಾನಿ ಕೇಳಿ, ದಯಮಾಡಿ ನಾಗರಾಜುರವರೆ, ಅದು ಮುಗಿದು ಹೋಗಿದೆ, ನೀವು ವಾಕೌಟ್ ಮಾಡಿದ್ದು ಆಯಿತು, ಬಂದದ್ದು ಆಯಿತು, ಅಲ್ಲಿಗೆ ಆ ಪ್ರಶ್ನೆ ಮುಗಿದು ಹೋಯಿತು. ನಾನು ಡಾ॥ ಅನ್ನದಾನಿಯವರನ್ನು ಕರೆದಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:– ಅದೇ, ಮಾನ್ಯ ಮಂತ್ರಿಗಳು ಹೇಳುತ್ತಾರೆ (x) ಎಂದು ಹೇಳಿದೆ (x) ಇನ್ನೇನು ಹೇಳಬೇಕು ಹೇಳಿ ನಾವು, ನಿಮ್ಮನ್ನು ಅಲ್ಲಿ ವೈಯಕ್ತಿಕವಾಗಿ ನಾನು ಯಾವ ಮಂತ್ರಿಗಳ ಮೇಲೂ ಹೇಳಿಲ್ಲ. ಈ ಸರ್ಕಾರ (x) ಬಿಡಿಸಿಕೊಂಡಿದ್ದೀರಾ? ಎಲ್ಲಿ ಬಿಡಿಸಿಕೊಂಡಿದ್ದೀರಾ? ಏನು ಸುಮ್ಮನೆ ನೀವು ಹೇಳುವುದು ಈ ಸದನದಲ್ಲಿ....

ಡಾ॥ ಕೆ. ಅನ್ನದಾನಿ :– ಮಾನ್ಯ ಅಧ್ಯಕ್ಷರೇ, 3284 ನೇ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :– ದಯವಿಟ್ಟು ತಾವು ಆವೇಶಕ್ಕೆ ಬರಬೇಡಿ.

ಅಧ್ಯಕ್ಷರು :– ನಾಗರಾಜು ಅವರೇ, ದಯಮಾಡಿ ಕುಳಿತುಕೊಳ್ಳಬೇಕು. ನಾನು ಡಾ॥ ಅನ್ನದಾನಿಯವರನ್ನು ಕರೆದಿದ್ದೇನೆ, ತಾವು ದಯಮಾಡಿ ಕುಳಿತುಕೊಳ್ಳಬೇಕು. ಅನ್ನದಾನಿಯವರೇ ಕೇಳಿ ಪ್ರಶ್ನೆಯನ್ನು.

(x) ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.